# ಗಾಬರಿ ಸಿಂಗ್ ಹೆಸರು ಕೊಟ್ಟಿದ್ದು ಜಗ್ಗೇಶ್

## ಭುವನೇಶ್

ಝೀ ಕನ್ನಡದ 'ಭರ್ಜರಿ ಬ್ಯಾಚುಲರ್' ಸ್ಪರ್ಧಿ



**◆ ರೀಲ್ಸ್ ಆರಂಭಿಸಿದ್ದು ಹೇಗೆ? ಆ ಆಸಕ್ತಿಯನ್ನು ಬೆಳೆಸಿಕೊಂಡ ಬಗ್ಗೆ ತಿಳಿಸಿ?**

ಹೊಳೆನರಸೀಪುರ ತಾಲ್ಲೂಕಿನ ಮಾಚಗೌಡನಹಳ್ಳಿ ನಮ್ಮೂರು. ವೃತ್ತಿಯಿಂದ ಕೃಷಿಕ. ವಿದ್ಯಾವಂತನಾಗಿದ್ದರೂ ಓದಿನ ಬಗ್ಗೆ ಆಸಕ್ತಿ ಅಷ್ಟಕ್ಕಷ್ಟೆ. ಬರವಣಿಗೆ ಮಾಡಲು ಬರುವುದಿಲ್ಲ. ಆರಂಭದಲ್ಲಿ 'ಟಿಕ್ ಟಾಕ್' ಆ್ಯಪ್‌ನಲ್ಲಿ ವಿಡಿಯೊಗಳನ್ನು ಅನೇಕರು ಮಾಡುತ್ತಾರೆ ನಾನು ಮಾಡೋಣ ಎಂದು ಶುರುಮಾಡಿದೆ. ಮೊದಲು ನಟ ಜಗ್ಗೇಶ್ ಅವರ ವಿಡಿಯೊಗಳಿಗೆ ಅನುಕರಣೆ ಮಾಡುತ್ತಿದ್ದೆ. ಅವರ ಅಭಿಮಾನಿಯಾದ ನಾನು ಅವರಂತೆ ಕಲಿಯಬೇಕು ಎಂದುಕೊಳ್ಳುತ್ತಿದ್ದೆ. ನನಗೆ ಸ್ವಂತ ಡೈಲಾಗ್ ಬರ್ತಿರಲಿಲ್ಲ. ಹಾಗಾಗಿ ತುಟಿಗಳನ್ನು ವಿಡಿಯೊದಂತೆ ಆಡಿಸುತ್ತಿದ್ದೆ. ಅಷ್ಟರಲ್ಲಿ ಟಿಕ್‌ಟಾಕ್ ನಿಷೇಧವಾಯಿತು. ದೀರ್ಘಕಾಲ ಇದೆಲ್ಲವನ್ನು ಬಿಡಬೇಕಾಯಿತು. ಅಷ್ಟರಲ್ಲಿ ಇನ್‌ಸ್ಟಾಗ್ರಾಮ್ ಅಪ್ಲಿಕೇಷನ್ ಇದೆ ಅಂತ ಗೊತ್ತಾಯಿತು. ಅದರಲ್ಲಿ ರೀಲ್ಸ್ ಹೊಸತಾಗಿ ಮಾಡಲು ಆರಂಭಿಸಿದೆ. ಅದಕ್ಕೆ ಹೊಸ ಬಗೆಯನ್ನು ಕಂಡುಕೊಂಡೆ. ಸ್ವಂತ ನನ್ನ ಪರಿಕಲ್ಪನೆಯ ಡೈಲಾಗ್ ಹೇಳಲು ಶುರುಮಾಡಿದೆ. ಅದಕ್ಕೆ ಜನರಿಂದ ಉತ್ತೇಜನ ಸಿಕ್ಕಿತು. ಹಾಗೆ ಅದನ್ನು ಬೆಳೆಸಿಕೊಂಡು ಹೋಗುತ್ತಿದ್ದೇನೆ.

**◆ ಚಿಕ್ಕಮಕ್ಕಳನ್ನೇ ನಿಮ್ಮ ತಂಡದಲ್ಲಿ ಏಕೆ ಸೇರಿಸಿಕೊಂಡಿದ್ದೀರಿ?**

ದೊಡ್ಡವರಾದರೆ ನನ್ನ ಉದ್ದೇಶದಂತೆ ರೀಲ್ಸ್ ತಯಾರಿಸಲು ಅಡ್ಡಿಯಾಗುತ್ತದೆ. ಮಕ್ಕಳು ಆಟದಂತೆ ಇದನ್ನು ತೆಗೆದುಕೊಳ್ಳುತ್ತಾರೆ. ಹೇಳಿದಂತೆ ಕೇಳುತ್ತಾರೆ. ದೊಡ್ಡವರು ಬಂದಿದ್ದರು. ಆದರೆ ಅವರು ದೀರ್ಘಕಾಲ ಉಳಿಯಲಿಲ್ಲ. ಹುಡುಗರಾದರೆ ಅನುಕೂಲ ಆಗುತ್ತದೆ. ಆ ಮಕ್ಕಳು ನಮ್ಮೂರಿನವರು. ನಾನು ರೀಲ್ಸ್ ಮಾಡುತ್ತಿದ್ದಾಗ ಬಂದು ಕುತೂಹಲದಿಂದ ನೋಡುತ್ತಿದ್ದರು. ಅಣ್ಣಾ ಇದೇನು ಎಂದು ಕೇಳುತ್ತಿದ್ದರು. ನೀನು ಮಾಡುತ್ತೀಯಾ ಎಂದು ಕೇಳಿದಾಗ ಉತ್ಸಾಹದಿಂದ ಮಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ನಾನು ಒಂದು ಡೈಲಾಗ್ ಹೇಳಿಕೊಟ್ಟರೆ ಅದನ್ನು ಆ ಕೂಡಲೇ ಹೇಳುತ್ತಾರೆ. ಅವರೂ ಶಾಲೆಗೆ ಹೋಗುವುದರಿಂದ ಶನಿವಾರ–ಭಾನುವಾರ ಹೆಚ್ಚಾಗಿ ವಿಡಿಯೊ ಮಾಡಿಕೊಳ್ಳುತ್ತೇನೆ. ರೀಲ್ಸ್ ಎಂಬ ನನ್ನ ಗಾಡಿಗೆ ಧನುಷ್ ಮತ್ತು ವಿಜಯ್ ಎರಡು ಗಾಲಿಗಳಂತೆ ಆಗಿದ್ದಾರೆ.

**◆ ರೀಲ್ಸ್‌ಗೆ ವಿಷಯ, ವಸ್ತು ಮತ್ತು ನಿರೂಪಣೆಯನ್ನು ಹೇಗೆ ಮಾಡುತ್ತಿದ್ದೀರಿ?**

ಓದು ಬರಹ ಗೊತ್ತೇ ವಿನಃ ಈ ಸಾಹಿತ್ಯ, ಬರಹ ಎಂಬುದು ಗೊತ್ತಿಲ್ಲ. ಏನೇ ಮಾಡಿದರು ನಾನು ಕಂಡಿದ್ದು–ಕೇಳಿದ ಸಂಗತಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ರೀಲ್ಸ್‌ಗೆ ಡೈಲಾಗ್‌ಗಳನ್ನು ಮೌಖಿಕವಾಗಿ ನಾವೇ ಸಿದ್ಧಪಡಿಸಿಕೊಳ್ಳುತ್ತೇವೆ. ಅದನ್ನೇ ಬಳಸಿಕೊಂಡು ಹಾಸ್ಯ ಸನ್ನಿವೇಶವನ್ನು ಕಟ್ಟಿಕೊಡುತ್ತಿದ್ದೇವೆ. ಅದಕ್ಕಾಗಿ ಯೋಚಿಸಿ ಸಾಹಿತ್ಯ ಬರೆಯಬೇಕು. ಅದನ್ನು ಹೀಗೆ ನಿರ್ಮಾಣ ಮಾಡಬೇಕು ಎಂದು ಪ್ಲಾನ್ ಮಾಡುವುದಿಲ್ಲ. ನಾನು ರೂಪಿಸಿದ ಡೈಲಾಗ್‌ಗಳನ್ನು ಕೆಲವೊಮ್ಮೆ ವಿಜಯ್ ಮತ್ತಷ್ಟು ಇಂಪ್ರೂ ಮಾಡುತ್ತಾನೆ. ಅವನೂ ಕ್ರಿಯೇಟಿವ್ ಯೋಚನೆ ಮಾಡುತ್ತಾನೆ. ಆರ್ಥಿಕವಾಗಿ ತೊಂದರೆ ಇಲ್ಲ. ನಾಲ್ಕು ವರ್ಷದಿಂದ ಚೆನ್ನಾಗಿಯೇ ನಡೆಯುತ್ತಿದೆ. ಅದುವೇ ಜೀವನಕ್ಕೆ ಆಧಾರವಾಗಿದೆ.

**◆ ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಸ್ಪರ್ಧೆಯ ನಂತರ ಹೇಗೆನಿಸುತ್ತಿದೆ?**

ನನ್ನ ರೀಲ್ಸ್ ನೋಡಿದ ಅನೇಕರು ಪ್ರೋತ್ಸಾಹಿಸಿದ್ದರಿಂದ 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಶೋಗೆ ಹೋಗಲು ಸಾಧ್ಯವಾಯಿತು. ವೀಕ್ಷಕರ ಒತ್ತಾಯಕ್ಕೆ ಮೈಸೂರಿಗೆ ಹೋಗಿ ಮೊದಲ ಆಡಿಷನ್ ಕೊಟ್ಟು ಬಂದೆ, ಆಯ್ಕೆ ಆಗಲಿಲ್ಲ. ಎರಡನೇ ಬಾರಿಯ ಆಡಿಷನ್ನಿನದೂ ಅದೇ ಕಥೆ. ಎಡಬಿಡದೆ ಪ್ರಯತ್ನ ಮಾಡಿದೆ. ಮೂರನೇ ಆಡಿಷನ್‌ನಲ್ಲಿ ಆಯ್ಕೆಯಾದೆ. ಅದರಿಂದ ನನ್ನ ಇಮೇಜ್ ಬೇರೆಯ ರೀತಿಯಲ್ಲಿ ಬದಲಾವಣೆ ಆಯಿತು. ಅದುವರೆಗೆ 'ಇವ್ನು ಕಣೋ ರೀಲ್ಸ್ ಮಾಡೋನು, ಅಲ್ನೋಡಿ ಹೋಯ್ತುವ್ನೆ' ಅಂತಿದ್ದ ಜನ 'ಅಗೋ ಕಾಮಿಡಿಯನ್ ಹೋಗ್ತಿದ್ದಾನೆ ನೋಡು. ಕಾಮಿಡಿ ಕಿಲಾಡಿ ನಟ, ಭರ್ಜರಿ ಬ್ಯಾಚುಲರ್ ಕಂಟೆಸ್ಟಂಟ್ ಕಣೋ' ಹೀಗೆಲ್ಲ ಹೇಳುತ್ತಾರೆ. ಕೆಲವರು ಮಾತನಾಡಿಸುತ್ತಾರೆ. 'ಏನ್ಸಾರ್ ಬಸ್ಸಿನಲ್ಲಿ ಹೋಗ್ತಿದ್ದೀರಿ. ನೀವು ಕಾರಲ್ಲಿ ಹೋಗಬೇಕು' ಎನ್ನುತ್ತಾರೆ.

**◆ ಮುಕ್ತವಾಗಿ ವಿಡಿಯೊ ಮಾಡುತ್ತಿದ್ದವರಿಗೆ ಒಂದು ಚೌಕಟ್ಟಿನಲ್ಲಿ ಕೆಲಸ ಮಾಡುವುದು ಹೇಗೆನಿಸುತ್ತಿದೆ?**

ನನ್ನ ಪಾಡಿಗೆ ರೀಲ್ಸ್ ಮಾಡುತ್ತಿದ್ದೆ. ಅದು ನನ್ನದೇ ಸಾಮ್ರಾಜ್ಯ. ಟೀವಿಯಲ್ಲಿ ನಿರ್ದೇಶಕರು, ಸ್ಕ್ರಿಪ್ಟ್ ಬರೆಯುವವರು ಇರುತ್ತಾರೆ. ಅವರು ಕಾರ್ಯಕ್ರಮ ಹೀಗೇ ಬರಬೇಕು ಎಂದು ಹೇಳುತ್ತಾರೆ. ಆರಂಭದಲ್ಲಿ ಇದೆಲ್ಲ ತುಂಬ ಕಷ್ಟ ಆಗುತ್ತಿತ್ತು. ಎಷ್ಟೇ ತಾಲೀಮು ಮಾಡಿಕೊಂಡು ಹೋಗಿದ್ದರೂ ಮೊದಲ ದಿನ ವೇದಿಕೆಯಲ್ಲಿ ಭಯದಿಂದ ತೊದಲಿದ್ದೆ. ತೀರ್ಪುಗಾರರ ಸ್ಥಾನದಲ್ಲಿ ಇದ್ದ ಜಗ್ಗೇಶ್ ಅವರನ್ನು ನೋಡಿ ಇನ್ನೂ ಗಾಬರಿಯಾಗಿದ್ದೆ. ಆಗ ನಾನು 'ಗಬ್ಬರ್ ಸಿಂಗ್' ಪಾತ್ರವನ್ನು ಮಾಡುತ್ತಿದ್ದೆ. ನನ್ನ ಅವಸ್ಥೆಯನ್ನು ನೋಡಿ ಅವರೇ 'ಗಾಬರಿ ಸಿಂಗ್' ರೀತಿ ಮಾಡ್ತಿದ್ದೀಯಾ ಅಂದರು. ಅದೇ ಹೆಸರು ಉಳಿದುಕೊಂಡಿತು.

**■ ರಾಘವೇಂದ್ರ ಕೆ.**